ಸಿಸಿಲರ ಮೇರೆಗೆ

(೧) ಬಳ್ಳಾರಿ ಜಿಲ್ಲೆ ಹರಪನಹಳ್ಳಿಯ ಏಸಿ.ಡಿ.ಪಿ.ಓ. ರವರನ್ನು ಹೊಸಪೇಟೆಗೆ ಜಿಲ್ಲಾ ಪರಿಷತ್‌ನವರು ವರ್ಗಾವಣೆ ಮಾಡುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯ ಏ.ಸಿ.ಡಿ.ಪಿ.ಓ, ಶಿಶು ಅಭಿವೃದ್ಧಿ ಯೋಜನಾ ಸಹಾಯಕ ಅಧಿಕಾರಿ ಹರಪನಹಳ್ಳಿಗೆ ಬಂದು ಒಂದು ವರ್ಷ ಒಂದು ತಿಂಗಳು ಆಗಿದೆ.

ಏ.ಸಿ.ಡಿ.ಪಿ.ಓ ರವರು ಜಿಲ್ಲಾ ಪರಿಷತ್ ಸದಸ್ಯೆ ಶ್ರೀಮತಿ ಅನುರಾಧ ಕೊಟ್ರೇಶಿ ಇವರಿಗೆ ಜೀಪ್ ಕೊಡದಿದ್ದಕ್ಕೆ, ೧೮-೨-೧೯೮೮ ರಂದು ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ದೂರು ನೀಡಿ, ವರ್ಗ ಮಾಡಲು ಕೇಳಿದ್ದಾರೆ.

ಈ ದೂರನ್ನು ಆದರಿಸಿ, ಏ.ಸಿ.ಡಿ.ಪಿ.ಓ, ಅವರನ್ನು ಜಿಲ್ಲಾ ಪರಿಷತ್, ಹೊಸಪೇಟೆಗೆ ವರ್ಗ ಮಾಡಿದರು.

ಇದನ್ನು ಪ್ರತಿಭಟಿಸಿ, ಎಸ್.ಎಫ್.ಐ. ಕರ್ನಾಟಕ ಪ್ರಾಂತ್ಯ ರೈತ ಸಂಘ, ಲಾರಿ ಹಮಾಲರ ಸಂಘ, ಮುಂತಾದ ಸಂಘಗಳು, ಸಂಬಂಧಪಟ್ಟವರಿಗೆ ಮತ್ತು ಜಿಲ್ಲಾಪರಿಷತ್ ಅಧ್ಯಕ್ಷರಿಗೆ ೨೫.೪.೮೮ ರಂದು ಮನವಿ ಸಲ್ಲಿಸಿದ್ದಾರೆ. ಬಳ್ಳಾರಿ ಏ.ಡಿ. ಜೊತೆ ಚರ್ಚಿಸಿದಾಗ ರದ್ದು ಮಾಡಲು ಹೇಳಿದ್ದರು.

ಈ ವರ್ಗಾವಣೆಯನ್ನು ರದ್ದು ಮಾಡದಿದ್ದುದನ್ನು ಪ್ರತಿಭಟಿಸಲು ೧.೬.೧೯೮೮ ರಿಂದ ಅಂಗನವಾಡಿ ಕಾರ್ಯಕರ್ತೆಯರು ಧರಣಿ ಸತ್ಯಾಗ್ರಹ ಮಾಡಿದ್ದಾರೆ. ಇವರಲ್ಲಿ ಎಸ್.ಎಫ್.ಐ. ಮತ್ತಿತರ ಸಂಘ ಸಂಸ್ಥೆಗಳವರು ಸೇರಿದ್ದಾರೆ. ಈ ಅನ್ಯಾಯವನ್ನು ಸರಿಪಡಿಸಿ, ಅಕ್ರಮ ವರ್ಗಾವಣೆಯನ್ನು ರದ್ದುಪಡಿಸಬೇಕು.

ಈ ಸೂಚನೆ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಹೇಳಿಕೆ ಮತ್ತು ವಿವರಣೆ ನೀಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಸಮಾಜ ಕಲ್ಯಾಣ ಸಚಿವರು ಪರಿಷತ್ತಿಗೆ ಹೋಗಿದ್ದಾರೆ. ನಾನು ಅವರು ಬಂದ ನಂತರ ಉತ್ತರವನ್ನು ಮಾನ್ಯ ವೆಂಕಟರಾಮಯ್ಯನವರಿಗೆ ತಿಳಿಸಿಕೊಡುತ್ತೇನೆ.

(೨) ಸರ್ಕಾರಿ ನೌಕರರ ಕ್ಯಾಜುಯಲ್ ರಜೆಯನ್ನು ೧೨ ರಿಂದ ೧೫ ದಿನಗಳಿಗೆ ಹೆಚ್ಚಿಸಲು ಮನವಿ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಸರಕಾರಿ ನೌಕರರಿಗೆ ಹಿಂದೆ ಇದ್ದ ವರ್ಷಕ್ಕೆ 15 ದಿನಗಳ ''ಕ್ಯಾಜುಯಲ್ ಲೀವ್'' ಸವಲತ್ತನ್ನು 12 ದಿನಗಳಿಗೆ ಇಳಿಸಲಾಗಿದೆ ಎಂದು ತಿಳಿದು ಬಂದಿದೆ. ಉದ್ಯೋಗಿಗಳ ಆಕಸ್ಮಿಕ ತೊಂದರೆ ಸಂದರ್ಭದಲ್ಲಿ ಬೇಕಾದ ಈ ಸಾಂದರ್ಭಿಕ ರಜೆಯ ಸವಲತ್ತಿನ ಕಡಿತ ವಾರಕ್ಕೆ ಐದು ದಿನಗಳ ಕೆಲಸ ಎಂಬ ನಿಗದಿಗೊಳಿಸಲ್ಪಟ್ಟಾಗ ಕಾರ್ಯರೂಪಕ್ಕೆ ಬಂದುದಾಗಿದೆ. ಈಗ ವಾರಕ್ಕೆ 6 ದಿನ ಕೆಲಸ ಆದರೂ ಸಾಂದರ್ಭಿಕ ರಜೆಯನ್ನು ಹೆಚ್ಚಿಸಿಲ್ಲ. ನೌಕರರಿಗೆ ಅವಶ್ಯವಾದ ಸವಲತ್ತು ಮೊದಲಿನಂತೆ ಹೆಚ್ಚಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ಕೊಡುತ್ತೇನೆ.

ಹೇಳಿಕೆ ಲಗತ್ತಿಸಲಾಗಿದೆ

ಆಗಸ್ಟ್ 1985ರಲ್ಲಿ ಸರ್ಕಾರಿ ಕಚೇರಿಗಳಲ್ಲಿ 5 ದಿನದ ವಾರದ ಪದ್ಧತಿಯನ್ನು ಜಾರಿಗೊಳಿಸಿದುದರ ಪರಿಣಾಮವಾಗಿ, 1986ರ ಕ್ಯಾಲೆಂಡರ್ ವರ್ಷದಿಂದ ಸಾಂದರ್ಭಿಕ ರಜೆಯ ಗರಿಷ್ಟ ಮೊತ್ತವನ್ನು 15 ದಿವಸಗಳಿಂದ 12 ದಿನಗಳಿಗೆ ಇಳಿಸಲಾಯಿತು.

ಸರ್ಕಾರಿ ಕಚೇರಿಗಳಲ್ಲಿ ಕೆಲಸದ ವೇಳೆಯನ್ನು ಹೆಚ್ಚಿಸಬೇಕೆಂದು ಕರ್ನಾಟಕ ರಾಜ್ಯ ಮೂರನೇ ವೇತನ ಆಯೋಗ ಸಿಫಾರಸ್ಸು ಮಾಡಿತ್ತು. ರಜೆಗಳ ಸಂಖ್ಯೆಯನ್ನು ಇಳಿಸಲೂ ಸಹ ಆಯೋಗವು ಸಲಹೆ ಮಾಡಿತ್ತು.

ಆರು ದಿನದ ವಾರದ ಪದ್ಧತಿಯನ್ನು ಪೂರ್ವ ಸ್ಥಿತಿಗೆ ತಂದನಂತರ ಸಾಂದರ್ಭಿಕ ರಜೆ ಮತ್ತು ಸರ್ಕಾರಿ ಕಛೇರಿಗಳಲ್ಲಿ ಕೆಲಸದ ವೇಳೆಗೆ ಸಂಬಂಧಿಸಿದ ವಿಷಯಗಳನ್ನು ಸರ್ಕಾರವು ಪರಿಶೀಲಿಸಿತು. ಸಾಂದರ್ಭಿಕ ರಜೆಯ ಗರಿಷ್ಟ ಮೊತ್ತವನ್ನು 12 ದಿನಗಳಿಗೆ ಉಳಿಸಿಕೊಳ್ಳಲು ನಿರ್ಧರಿಸಲಾಯಿತು.